**Code No. 10 X(B)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಇಂದು ಯಾರ ಬಾಯಲ್ಲಿ ಕೇಳಿದರೂ ಬಿಡುವುದೇ ಇಲ್ಲ ಸ್ವಾಮೀ, ಕೆಲಸವೋ ಬೆಟ್ಟದಷ್ಟಿದೆ, ಆದ್ರೆ ಅದೆಲ್ಲವನ್ನೂ ಮಾಡಿ ಮುಗಿಸಲು ಟೈಮೇ ಸಾಲದು. ಯಾವುದನ್ನು ಮಾಡುವುದೋ, ಯಾವುದನ್ನು ಬಿಡುವುದೋ ಒಂದೂ ತಿಳಿಯದಾಗಿದೆ ಎಂದು ಚಿಂತಿಸುವವರ ಸಂಖ್ಯೆಯೇ ಹೆಚ್ಚಾಗುತ್ತಿರುವುದು ನಮಗಿಂದು ಕಂಡುಬರುತ್ತಿದೆ. ಏಕಿಂತಹಾ ಪರಿಸ್ಥಿತಿ ಎಂದರೆ ಈ ವರ್ಗದವರಿಗೆ ಸಮಯ ಪ್ರಜ್ಞೆ, ವಿವೇಕಯುತ ಸಮಯಪಾಲನೆ, ಬಳಕೆಯ ಬಗ್ಗೆ ಸರಿಯಾದ ಅರಿವಿಲ್ಲದಿರುವುದೇ ಬಹು ಮಟ್ಟಿಗೆ ಕಾರಣವಾಗಿದೆ ಎಂದರೆ ಮಾತು ತಪ್ಪಾಗಲಾರದು. ಹಣ ಕಳೆದುಕೊಂಡರೆ ಮತ್ತೆ ಅದನ್ನು ಸಂಪಾದಿಸಬಹುದು. ಆದರೆ ಕಳೆದುಹೋದ ಕಾಲವನ್ನು ಮರಳಿ ಪಡೆಯಲಾಗದು, ಅದಕ್ಕಾಗಿಯೇ ಟೈಮ್ ಅಂಡ್ ಟೈಡ್ ವೈಟ್ಸ್ ಫಾರ್ ನನ್ ಎಂಬ ಗಾದೆ ನಮ್ಮಲ್ಲಿ ಬಳಕೆಯಲ್ಲಿದೆ, ಕಾಲ ಯಾರಿಗೂ, ಯಾವುದಕ್ಕೂ ಕಾಯುವುದಿಲ್ಲ. ಸತತ ಚಲನೆಯೇ ಅದರ ಮೂಲ ಗುಣ, ಸ್ವಭಾವ. ಈ ಕೆಲಸಕ್ಕಾಗಿ ಸಮಯದ ಬಳಕೆ ಅನಗತ್ಯ, ವ್ಯರ್ಥ ಎಂದು ಪರಿಗಣಿಸಿ, ಶಿಸ್ತುಬದ್ಧವಾಗಿ ಕಾಲವನ್ನು ಬಳಿಸಿಕೊಂಡು ಮಾಡಬೇಕಾದ ತಮ್ಮೆಲ್ಲ ಕೆಲಸಗಳನ್ನೂ ಮುಗಿಸಿಕೊಳ್ಳುತ್ತಾರೆ. ವಿವೇಕಯುತವಾದ ಸಮಯದ ಹಂಚಿಕೆ, ಅದರ ಕಟ್ಟುನಿಟ್ಟಿನ ಬಳಕೆ, ಸಮಯಪಾಲನೆ ಬಹಳಷ್ಟು ಜನರಲ್ಲಿ ಇಲ್ಲವಿರುವುದೇ ಇಂದಿನ ಬಹಳಷ್ಟು ಜನರಲ್ಲಿನ ದೊಡ್ಡ ಕೊರತೆಯಾಗಿದೆ.

ಹೀಗೆಂದಾಗ, ಅಯ್ಯೋ ಪಾಪ, ಇವರಂಲ್ಲಾ ತಿಂಡಿ ಊಟ ಬಿಟ್ಟು ಕೆಲಸವನ್ನೇ

[ Turn over

ಮಾಡುತ್ತಿರುವರೇ ಎಂಬ ಕರುಣೆ ತೋರಿಸಬೇಕಿಲ್ಲ. ಏಕೆಂದರೆ, ಅವರು ಹೊಟ್ಟೆಗೆ ಮಾತ್ರ ಮೋಸ ಮಾಡುವವರಲ್ಲ, ಸಕಾಲದಲ್ಲೇ ತಿಂಡಿ ಊಟ ಮುಗಿಸುವವರಿವರು. ನ್ಯೂಸ್ ಪೇಪರ್, ಫಿಲಂ ಮ್ಯಾಗಜಿನ್, ಪೂರ್ತಿ ಓದದೆ, ತಾವಿಚ್ಚಿಸಿದ ಟಿ.ವಿ. ಪ್ರೋಗ್ರಾಮ್ ನೋಡದೆ ಮೇಲೇಳುವವರಲ್ಲ. ಹಾಗಾದರೆ ಇವರಿಗೆ ಸಮಯವಿಲ್ಲದಿರುವುದು ಯಾವ ಕೆಲಸಕ್ಕೆ ಎಂದಿರಾ ಇವರ ಮನ ಇಚ್ಚಿಸದ, ಆಸಕ್ತಿಯಿಂದ ಹೆಚ್ಚುವರಿ ಆದಾಯತರದ ಕೆಲಸಕ್ಕೆ ಮಾತ್ರ ಇವರಿಗೆ ಬಿಡುವಿರುವುದಿಲ್ಲ ಅಷ್ಟೇ. ಹೀಗೆ ಮನ ಇಚ್ಚಿಸದ ಐಟಂಗಳ ಪೈಕಿ, ಜಪ ಧ್ಯಾನ, ದೈವಸ್ಮರಣೆ ದೇವತಾರಾಧನೆಗಳೂ ಸೇರಿಸುವುದು ದುರದೃಷ್ಟಕರ ವಿಷಯಗಳಾಗಿವೆ. ಇವುಗಳಲ್ಲಿ ತಮಗೆ ಆಸಕ್ತಿ ಇಲ್ಲ ಎಂದು ನೇರವಾದ ಮಾತುಗಳಲ್ಲಿ ಹೇಳದೆ, ಇಂದು ಇದಕ್ಕೆಲ್ಲಾ ನಮಗೆ ಬಿಡುವಿಲ್ಲ. ನಾನು ಟೊಟಲ್ಲಿ ಬಿಸಿ ಎಂದು ಬಿಡುತ್ತಾರೆ.

ಒಮ್ಮೆ ಪೂಜ್ಯ ಚಿನ್ಮಯಾನಂದ ಸ್ವಾಮಿಗಳನ್ನು ಭೇಟಿ ಮಾಡಲು ಆಶ್ರಮಕ್ಕೆ ಬಂದ ನಗರದ ಒಬ್ಬ ಪ್ರಸಿದ್ಧ ವೈದ್ಯರು, ಉಭಯ ಕುಶಲೋಪರಿ ಮುಗಿಸಿದರು. ಹೀಗಾಗಿ, ದೈವ ಸ್ಮರಣೆ, ಪೂಜೆ, ಚಟುವಟಿಕೆಗಳಿಗೆ ಬಿಡುವೇ ಸಿಗುತ್ತಿಲ್ಲ. ಎಂದು ಪೇಚಾಡಿದರಂತೆ. ಈ ಸಣ್ಣ ವಿಚಾರಕ್ಕಾಗಿ ನೀವು ಬೇಸರಪಡುವುದು ಬೇಡ ಎಂದು ಸಮಾಧಾನಪಡಿಸಿದ ಸ್ವಾಮೀಜಿ, ವೈದ್ಯರನ್ನು ಕುರಿತು, ನೀವು ಪ್ರತಿ ಸಾರಿ ರೋಗಿಯ ತಪಾಸಣೆ ಮಾಡಿ ಕೃಷ್ಣ, ಕೃಷ್ಣ ಎನ್ನುತ್ತಾ ಚೀಟಿ ಬರೆಯಿರಿ.